**ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕ್ಷೇತ್ರ ನಿರ್ದೇಶಕರ ಕಛೇರಿ,**
**ಭದ್ರಾ ಹುಲಿ ಯೋಜನೆ, ಚಿಕ್ಕಮಗಳೂರು.**
(ಕಛೇರಿ:08262-234904 ಫ್ಯಾಕ್ಸ್:08262-230032 ಇ-ಮೇಲ್:dcfbhadra@yahoo.com)

ಸಂಖ್ಯೆ:ಎ5/ಭೂಮಿ/ಸಿಆರ್-9/2008-09 1164 ದಿನಾಂಕ:08-08-2019.

**ಇವರಿಗೆ,**

ಕುಲಸಚಿವರು,
ಕುವೆಂಪು ವಿಶ್ವವಿದ್ಯಾನಿಲಯ,
ಶಂಕರಘಟ್ಟ,
ಲಕ್ಕವಳ್ಳಿ.

ಮಾನ್ಯರೇ,

**ವಿಷಯ:** ಕುವೆಂಪು ವಿಶ್ವವಿದ್ಯಾನಿಲಯಕ್ಕೆ ಗುತ್ತಿಗೆ ಆಧಾರದಲ್ಲಿ ಮಂಜೂರಾಗಿರುವ 230 ಎಕರೆ (93.08 ಹೆಕ್ಟೇರ್) ಜಮೀನಿನ ಗುತ್ತಿಗೆ ಅವಧಿ ನವೀಕರಣ ಕುರಿತು.

**ಉಲ್ಲೇಖ:**
1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬೆಂಗಳೂರುರವರ ಪ್ರವಾಸ ದಿನಾಂಕ: 07-08-2019.
2. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಚಿಕ್ಕಮಗಳೂರು ವೃತ್ತ, ಚಿಕ್ಕಮಗಳೂರುರವರ ಪತ್ರ ಸಂಖ್ಯೆ: ಎ10/ಎಲ್ಎನ್‌ಡಿ/ಕುವಿವಿ/ದಿನಪತ್ರಿಕೆ/ ಸಿಆರ್-02/2014-15, ದಿನಾಂಕ: 08-08-2019.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ದಿನಂಕ: 07-08-2019ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬೆಂಗಳೂರುರವರು ಪ್ರವಾಸ ಕೈಗೊಂಡಿದ್ದು, ಕುವೆಂಪು ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಕುವೆಂಪು ವಿಶ್ವವಿದ್ಯಾನಿಲಯದ ಗುತ್ತಿಗೆ ನವೀಕರಣ ವಿಚಾರಕ್ಕೆ ಸಂಬಂಧಿಸಿದಂತೆ ಸದರಿ ಸ್ಥಳವನ್ನು ಪರಿಶೀಲಿಸಿದ ಸಂದರ್ಭದಲ್ಲಿ ಗುತ್ತಿಗೆ ನವೀಕರಣ ಪ್ರಸ್ತಾವನೆಯನ್ನು ಈಗಾಗಲೇ ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯಲ್ಲಿ ಬೇಡಿಕೆ ಇರುವ ಅರಣ್ಯ ಜಮೀನಿನ ವಿಸ್ತೀರ್ಣವನ್ನು ಕಡಿಮೆ ಮಾಡಿ ಪರಿಷ್ಕೃತ ಪ್ರಸ್ತಾವನೆಯನ್ನು ನಕಾಶೆಯೊಂದಿಗೆ ತಯಾರಿಸಿ ಪರಿಷ್ಕೃತ ಪ್ರಸ್ತಾವನೆಯನ್ನು ಎಫ್.ಸಿ. ಆನ್‌ಲೈನ್ ಮುಖಾಂತರ ಸಲ್ಲಿಸಲು ಉಪಯೋಗಿ ಸಂಸ್ಥೆಯವರಿಗೆ ಸೂಚಿಸುವಂತೆ ಉಲ್ಲೇಖಿತ(2)ರ ಪತ್ರದಲ್ಲಿ ತಿಳಿಸಿರುತ್ತಾರೆ.

ಮೇಲಾಧಿಕಾರಿಗಳ ಸೂಚನೆಯಂತೆ ಈಗಾಗಲೇ ಆನ್‌ಲೈನ್ ಮೂಲಕ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಬೇಡಿಕೆ ಇರುವ ಅರಣ್ಯ ಜಮೀನಿನ ವಿಸ್ತೀರ್ಣವನ್ನು ಕಡಿಮೆ ಮಾಡಿ ಪರಿಷ್ಕೃತ ಪ್ರಸ್ತಾವನೆಯನ್ನು ನಕಾಶೆಯೊಂದಿಗೆ ತಯಾರಿಸಿ ಪರಿಷ್ಕೃತ ಪ್ರಸ್ತಾವನೆಯನ್ನು ಎಫ್.ಸಿ. ಆನ್‌ಲೈನ್ ಮುಖಾಂತರ ಸಲ್ಲಿಸುವಂತೆ ತಿಳಿಸಿದೆ.

ನಿಮ್ಮ ವಿಶ್ವಾಸಿ,
ಸಹಿ/-
ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕ್ಷೇತ್ರ ನಿರ್ದೇಶಕರು,
ಭದ್ರಾ ಹುಲಿ ಯೋಜನೆ, ಚಿಕ್ಕಮಗಳೂರು.

ಪ್ರತಿಯನ್ನು :-

1) ಗೌರವಗಳೊಂದಿಗೆ, ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ), ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ಗೌರವಗಳೊಂದಿಗೆ, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಚಿಕ್ಕಮಗಳೂರು ವೃತ್ತ, ಚಿಕ್ಕಮಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3) ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಭದ್ರಾ ವನ್ಯಜೀವಿ ಉಪವಿಭಾಗ, ಲಕ್ಕವಳ್ಳಿ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
4) ವಲಯ ಅರಣ್ಯಾಧಿಕಾರಿ, ಭದ್ರಾ ವನ್ಯಜೀವಿ ವಲಯ, ಲಕ್ಕವಳ್ಳಿ/ತಣಿಗೆಬೈಲು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.

ರವಾನಿಸಲಾಗಿದೆ
ದಿನಾಂಕ 9/8/19

ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕ್ಷೇತ್ರ ನಿರ್ದೇಶಕರು,
ಭದ್ರಾ ಹುಲಿ ಯೋಜನೆ, ಚಿಕ್ಕಮಗಳೂರು.

A5/2019-20/Kuvempu University letr